**<u>ಸಾಕ್ಷಿಯನ್ನು ದಿಃ 24.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 4 ಮತ್ತು 5 ನೇ ವಾದಿ ಪರ ಶ್ರೀ ಎಸ್ ಕೆ ವಕೀಲರಿಂದಃ-</u>**

ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿರುತ್ತೇನೆ. ತಂದೆಗೆ ಸೇರಿದ ಜಮೀನನ್ನು ಬಿಟ್ಟು ಕೊಡುವಂತೆ ಕೇಸ್ ಹಾಕಿರುತ್ತಾರೆ. ಈ ದಾವೆಯನ್ನು ಜವರಮ್ಮ ಮತ್ತು ಪಾಪಯ್ಯನವರು ನಮ್ಮ ಮೇಲೆ ಹಾಕಿರುತ್ತಾರೆ. ಸದರಿ ದಾವೆಯಲ್ಲಿ ಏನು ತಕಾರಾರು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ತಾತನ ಹೆಸರು ಸಣ್ಣಯ್ಯ. ಸಣ್ಣಯ್ಯರವರಿಗೆ 4 ಜನ ಮಕ್ಕಳು ಅವರುಗಳೆಂದರೆ ಜವರಯ್ಯ, ಮರುಚಯ್ಯ, ಪಾಪಯ್ಯ ಮತ್ತು ಸಾಕಮ್ಮ. ಜವರಯ್ಯನಿಗೆ 3 ಜನ ಮಕ್ಕಳು. ಯಾವ ಯಾವ ಸ್ವತ್ತುಗಳ ಮೇಲೆ ದಾವೆ ಹಾಕಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತುಗಳು ನಮ್ಮ ಮತ್ತು ವಾದಿಗಳ ಒಟ್ಟು ಕುಟುಂಬದ ಸ್ವತ್ತುಗಳೆಂದರೆ ಸರಿ. ನಾವು ಸದರಿ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನ ಹೊಂದಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ 4 ಮತ್ತು 5 ನೇ ವಾದಿಯವರಿಗೆ ಭಾಗ ಕೊಡಲು ಏನಾದರೂ ತಕರಾರು ಇದೆಯೇ ಎಂದರೆ ಇಲ್ಲವೆನ್ನುತ್ತಾರೆ.

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳು ಕಾಲಾವಕಾಶ ಕೋರಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.